ಬಿಟ್ಟು ಬಿಡುವ ಪ್ರಕೃತಿಯವನಲ್ಲ ಆತ. ನೂರಾರು ಕತೆಗಳನ್ನು ಹೇಳುತ್ತ ನಗರದಲ್ಲಿ ಸುತ್ತಾಡಿದೆವು. ಮದ್ರಾಸಿನಲ್ಲಿದ್ದಾಗ ಅವನಿಗಿದ್ದ ನರ್ಸ್ ಪ್ರಿಯತಮೆಯರು... ಆಂಗ್ಲೋ ಇಂಡಿಯನ್ ಗೆಳತಿ, ಹಳ್ಳಿಯಲ್ಲಿ ಕಾಯಮಾಗಿದ್ದ ಪ್ರೇಮಭಾಜನರು. ಹೀಗೆ ಹಲವನ್ನು ಅವನು ಹೇಳಿದ. ನಡುವೆ ಕಾಫಿ ಹೌಸಿಗೂ ಹೋದೆವು.

ಥಿಯೇಟರಿನ ಮುಂಭಾಗಕ್ಕೆ ತಲುಪಿದಾಗ ಇಂಗ್ಲಿಷ್ ಚಿತ್ರವೆಂದು ಗೊತ್ತಾಯಿತು. ಎಸ್ತರ್ ವಿಲ್ಲಿಯಮ್ಸ್ ನಟಿಸಿದ 'ಜಲದೇವತೆ'. ಅವನಿಗೆ ಅದನ್ನು ನೋಡಿಯೇ ತೀರಬೇಕು. ಫಸ್ಟ್ ಶೋ ಆರಂಭವಾಗುವ ಸಮಯ. ಸಿನಿಮಾಕ್ಕೆಂದು ಮನೆಯಲ್ಲಿ ಹೇಳಿಯೂ ಇಲ್ಲ. ತಡವಾಗಿ ಹೋದರೆ ಅಪ್ಪ ಏನೆಂದು ಭಾವಿಸಿಯಾರು?

ಗೋಪಿಯ ಒತ್ತಾಯಕ್ಕೆ ನಾನೂ ಥಿಯೇಟರಿಗೆ ಹೋದೆ...

ಸೊಂಟಕ್ಕೆ ಚಿಕ್ಕ ಬಟ್ಟೆ ತುಂಡುಗಳನ್ನು ಸುತ್ತಿ ನಗ್ನವಾದ ದೇಹವನ್ನು ಪ್ರದರ್ಶಿಸುವ ದೃಶ್ಯಗಳು... ಭಾವಾವೇಶದ ಕಡಿವಾಣ ತುಂಡರಿಸುವ ಮಾಂಸದ ಚಲನೆಗಳು!...

ನಾನು ಲಕ್ಷ್ಮಿಯನ್ನು ನೆನಪಿಸಿಕೊಂಡೆ. ಹನ್ನೊಂದು ಗಂಟೆಗೆ ಅವಳು ಬರಬಹುದು. ತಾರುಣ್ಯ ತುಳುಕುವ ಆ ಹದಿನೇಳರವಳು. ಪರದೆಯಲ್ಲಿ ಕಣ್ಣುಗಳನ್ನು ನೆಟ್ಟು ಬರಲಿರುವ ಆ ದೃಶ್ಯವನ್ನು ನಾನು ಕಲ್ಪಿಸಿಕೊಂಡೆ.

ಸಿನಿಮಾ ಮುಗಿದು, ಒಂಬತ್ತೂವರೆಗೆ ಹೊರಗೆ ಬಂದೆವು. ಅಷ್ಟರಲ್ಲಿ ಗೋಪಿ ಇನ್ನೊಂದು ಪ್ಲಾನ್ ಮುಂದಿಟ್ಟ. ಲಿಕ್ಕರ್ ಹೌಸಿಗೆ ಹೊಕ್ಕೆವು.

ನೊರೆಯಾಡುವ ವಿದೇಶಿ ಮದ್ಯದ ಬಾಟ್ಲಿಗಳನ್ನು ತೆರೆದೆವು.

ಹತ್ತೂವರೆಗೆ ಗೋಪಿಗೆ ಗುಡ್‌ನೈಟ್ ಹೇಳಿ ನಾನು ನಡೆದೆ. ಕಾಲುಗಳು ಎಡಹುತ್ತಿವೆ... ತಲೆಯಲ್ಲಿ ಬೆಚ್ಚಗಿನ ತರಂಗಗಳು. ಆಕಾಶದ ವಿಶಾಲ ತೆರಪಿನ ದಾರಿಯಲ್ಲಿ ಸಾಗುತ್ತಿದ್ದೇನೆಂದು ಅನ್ನಿಸಿತು.

ಅಪ್ಪ ಈ ಸ್ಥಿತಿಯಲ್ಲಿ ಕಂಡರೆ ಏನೆಂದಾರು? ಎಲ್ಲಿದ್ದೆಯೆಂದು ಕೇಳಿದರೋ? ನನ್ನ ಚಿಂತಾವಲಯದಲ್ಲಿ ಅದೊಂದು ಸಮಸ್ಯೆಯೇ ಆಗಿರಲಿಲ್ಲ.

ಮನೆಗೆ ತಲುಪಿದಾಗ ಅದೃಷ್ಟಕ್ಕೆ ಅಪ್ಪ ಜಗಲಿಯಲ್ಲಿಲ್ಲ. ಅವರು ಮಲಗಿದ್ದಾರೆ.

ಅಡುಗೆಯವನು ಊಟವನ್ನು ತೆಗೆದಿರಿಸಿ ನನಗಾಗಿ ಕಾದು ಕುಳಿತಿದ್ದ.

ಲಕ್ಷ್ಮಿ ಅಡುಗೆಕೋಣೆಯಲ್ಲಿ ಕಾಣಿಸಲಿಲ್ಲ. ನಾನು ಊಟಕ್ಕೆ ನಿಲ್ಲಲಿಲ್ಲ. ಸಾಮಾನ್ಯವಾಗಿ ಕೆಳಗೆ ಎಡಜಗಲಿಯ ಕೊನೆಗಿರುವ ಕೋಣೆಯಲ್ಲಿ ಅವಳು ಮಲಗುವುದು. ಆ ಕೋಣೆಯ ಬಾಗಿಲು ಮುಚ್ಚಿದೆ. ಅವಳು ಅದರೊಳಗೆ ನಿದ್ರಿಸುತ್ತಿದ್ದಾಳೋ? ಅಥವಾ ನನಗಾಗಿ ಕಾದು ಮೇಲೆ... ಕೋಣೆಯ ಒಳಗೆ ನಾನಿಲ್ಲದ ಕಾರಣ ಅವಳು ಮರಳಿ ಹೋಗಿರಬಹುದೇ?

ಏಣಿ ಮೆಟ್ಟಿಲುಗಳನ್ನು ಏರಿದೆ. ಕಾಲುಗಳು ಸ್ತಿಮಿತದಲ್ಲಿರಲಿಲ್ಲ. ಮೆದುಳಿನೊಳಗೆ ಗುಬ್ಬಚ್ಚಿಗಳು ಹಾರಾಡುತ್ತಿವೆಯೋ?

ವರಾಂಡಕ್ಕೆ ತಲುಪಿದಾಗ ನಾನು ಮೊದಲಿಗೆ ಗಮನಿಸಿದ್ದು ಶಾಂತಾಳ ಕೋಣೆ. ಭಾಗ್ಯ, ಅವಳು ನಿದ್ರಿಸಿದ್ದಾಳೆ. ಅವಳ ಕೋಣೆಯಲ್ಲಿ ಬೆಳಕಿಲ್ಲ. ನನ್ನ ಕೋಣೆಯ ಬಾಗಿಲು ತೆರೆದಿರಿಸಿದೆ. ಒಳಗೆ ಬೆಳಕಿಲ್ಲ. ಯಾರೂ ಇವತ್ತು ದೀಪ ಹಚ್ಚಲಿಲ್ಲವೇ? ಲಕ್ಷ್ಮಿ ಆರಿಸಿರಬಹುದು... ಹನ್ನೊಂದು ಗಂಟೆಗೆಂದು ಹೇಳಿದ್ದುದು... ಈಜುಡುಗೆ ತೊಟ್ಟು ನಿಂತಿರುವ ಎಸ್ತರ್ ವಿಲ್ಲಿಯಮ್ಸ್‌ನ ರೂಪ ನೆನಪಿಗೆ ಬಂತು... ತುಂಬಿ ನೊರೆಯುವ ಲಿಕ್ಕರ್ ಹೌಸಿನ ಪಾನಪಾತ್ರೆಗಳು... ಸುಖಕರವಾದ ಲಹರಿಯ ತರಂಗಗಳು ರಕ್ತದಲ್ಲಿ ಏಳುತ್ತಿವೆ... ಮರೆಯಾಗುತ್ತಿವೆ.

ಸದ್ದು ಮಾಡದೆ ಒಳಗೆ ಹೋದೆ. ಕತ್ತಲು... ತೆರೆದಿಟ್ಟ ಕಿಟಕಿಗಳ ಮೂಲಕ ಬರುವ ಮಂದ ಬೆಳಕಿನಲ್ಲಿ